REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)


ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 31 | ಸಂಚಿಕೆ : 26 | 2 ಅಕ್ಟೋಬರ್ 2024 | ಬುಧವಾರ | ಪುಟಗಳು : 8 | ಬೆಲೆ : 2/-

## ಉಡುಪಿಯಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣ



**ಉಡುಪಿ :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ಎಲ್.ಐ.ಸಿ. ನೌಕರರ ಸಹಕಾರ ಬ್ಯಾಂಕಿನ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರುಗಳು ಮತ್ತು ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳಿಗೆ ದಿನಾಂಕ : 27.09.2024ರಂದು ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ಲಿಕೋ ಬ್ಯಾಂಕಿನ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಈ ವಿಚಾರ ಸಂಕಿರಣದಲ್ಲಿ ಮೊದಲು ಪ್ರಾರ್ಥನೆಯನ್ನು ಕುಮಾರಿ ಸರಿತಾ ಇವರಿಂದ ದೇವರ ನಾಮದೊಂದಿಗೆ ಪ್ರಾರಂಭಿಸಲಾಯಿತು. ಈ ವಿಚಾರ ಸಂಕಿರಣದ ಉದ್ಘಾಟನೆಯನ್ನು ಉಡುಪಿಯ ಜನಪ್ರಿಯ ಶಾಸಕರು ಮತ್ತು ಮಹಾಲಕ್ಷ್ಮೀ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಯಶಪಾಲ್ ಎ. ಸುವರ್ಣ ಇವರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ರಾಷ್ಟ್ರೀಕೃತ ಬ್ಯಾಂಕಿಗೆ ಸರಿಸಮನಾಗಿ ಕಾರ್ಯನಿರ್ವಹಿಸುತ್ತಿವೆ. ಅದರಲ್ಲಿ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯು ರಾಷ್ಟ್ರೀಕೃತ ಬ್ಯಾಂಕುಗಳಿಗೆ ಮೈಲುಗಲ್ಲಾಗಿದೆ. ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಹೆಚ್ಚಿನ ರೀತಿಯಲ್ಲಿ ತರಬೇತಿಗಳಿಗೆ ನಿಯೋಜಿಸಿ ಮಹಾಮಂಡಳವು ಏರ್ಪಡಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅದರ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ಸಭೆಗೆ ತಿಳಿಸಿದರು.

ಮಹಾಮಂಡಳದ ನಿರ್ದೇಶಕರು ಹಾಗೂ ವಿಶ್ವಕರ್ಮ ಸಹಕಾರಿ ಬ್ಯಾಂಕಿನ

2ನೇ ಪುಟಕ್ಕೆ...



3 ಸಿದ್ಧಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ 31ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ
4 ವಿಜಯಪುರದ ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕಿನ 30ನೇ ವಾರ್ಷಿಕ ಸರ್ವಸಾಧಾರಣ ಸಭೆ
7 ನಿಮ್ಮ ಪ್ರಶ್ನೆ – ನಮ್ಮ ಉತ್ತರ

## ಬ್ಯಾಂಕಿಂಗ್ ನ್ಯೂಸ್



## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...

### ಸರಳ ಬದುಕಿನ ಎರಡು ದಿವ್ಯ ಚೇತನಗಳ ನೆನೆಯೋಣ

ಪ್ರತಿ ವರ್ಷ ಅಕ್ಟೋಬರ್ 2, ದೇಶದ ಎರಡು ದಿವ್ಯ ಚೇತನಗಳ ನೆನೆವ ದಿನವಾಗಿದೆ. ಸರಳ ಬದುಕಿನ, ಸೌಮ್ಯ ನಡುವಳಿಕೆಯ, ನುಡಿದಂತೆ ನಡೆವ, ಸತ್ಯ, ಅಹಿಂಸೆಯಲ್ಲಿ ನಂಬಿಕೆಯನಿಟ್ಟ, ತನ್ನ ಸುಖ, ಸಂತೋಷವನ್ನು ತ್ಯಾಗ ಮಾಡಿ ದೇಶದ ಹಿತಕ್ಕಾಗಿ ತಮ್ಮನ್ನು ತಾವೇ ಅರ್ಪಿಸಿಕೊಂಡ ಮಹಾತ್ಮ ಗಾಂಧಿ ಹಾಗೂ ಅದೇ ಹಾದಿಯಲ್ಲಿ ಸಾಗಿದ ಲಾಲ್ ಬಹದ್ದೂರ್ ಶಾಸ್ತ್ರೀ ಅವರುಗಳೇ ಆ ಎರಡು ದಿವ್ಯ ಚೇತನಗಳು.

ಯಾರು ಲೋಕದ ಹಿತಕ್ಕಾಗಿ ತಮ್ಮನ್ನು ತಾವೇ ಅರ್ಪಿಸಿಕೊಳ್ಳುತ್ತಾರೋ ಅವರು ಸಾವಿನ ಆಚೆಗೂ ಉಳಿಯುತ್ತಾರೆ, ಮುಂದಿನ ಜನಾಂಗವೂ ಅವರನ್ನು ಸ್ಮರಿಸುತ್ತದೆ. ಆ ಮಹಾ ಚೇತನಗಳು ಬದುಕಿ ಬಾಳಿದ ಕೆಲ ರೀತಿಯನ್ನು ನಾವುಗಳು ಸ್ವಲ್ಪವಾದರೂ ಅನುಸರಿಸಬೇಕು, ನಮ್ಮ ನಿತ್ಯ ಜೀವನದಲ್ಲಿ ಕೆಲ ಮೌಲ್ಯಗಳನ್ನಾದರೂ ಅಳವಡಿಸಿಕೊಳ್ಳಬೇಕು ಇದು ನನ್ನ ನಂಬಿಕೆಯಾಗಿದೆ.

ನಿಮಗೆಲ್ಲಾ ಗೊತ್ತಿರುವ ಹಾಗೆ, ಗಾಂಧೀಜಿ ಖ್ಯಾತ ವಕೀಲರಾಗಿದ್ದರು, ದಕ್ಷಿಣ ಆಫ್ರಿಕಾದಲ್ಲಿನ ವರ್ಣಬೇಧ ನೀತಿಯನ್ನು ಪ್ರತಿಭಟಿಸುವ ಮೂಲಕ ಅವರ ಸಾರ್ವಜನಿಕ ಬದುಕಿಗೆ ಬಂದವರು. ನಂತರ ಸ್ವದೇಶಕ್ಕೆ ಬಂದ ನಂತರ ಇಲ್ಲಿನ ಸ್ವಾತ್ರಂತ್ಯ ವಿಮೋಚನೆಗೆ ಅಹಿಂಸಾ ಮಾರ್ಗದಲ್ಲಿ ಹೋರಾಟ ಆರಂಭಿಸಿದರು. ಈ ಎಲ್ಲವನ್ನು ಆರಂಭಿಸುವ ಮೊದಲೇ ಅವರು ಪತ್ರಕರ್ತರಾಗಿದ್ದರು.

ದಕ್ಷಿಣ ಆಫ್ರಿಕಾದಲ್ಲಿ ಅವರು ಶುರು ಮಾಡಿದ ಮೊದಲ ಪತ್ರಿಕೆ 'ಇಂಡಿಯನ್ ಒಪೀನಿಯನ್'. ಅಲ್ಲಿನ ವರ್ಣಬೇಧ ನೀತಿಯ ವಿರುದ್ಧ ಹೋರಾಟಕ್ಕಾಗಿಯೇ ಈ ಪತ್ರಿಕೆಯನ್ನು ಅವರು ಜನಸಮೂಹದ ಧ್ವನಿಯಾಗಿ, ಅಲ್ಲಿನ ಸರ್ಕಾರದ ನೀತಿಗಳನ್ನು ವಿರೋಧಿಸುವ ಮಾಧ್ಯಮವಾಗಿ ಬಳಸಿಕೊಂಡರು. ಇಂಡಿಯಾಗೆ ಬಂದ ನಂತರ 'ಯಂಗ್ ಇಂಡಿಯಾ' ಹಾಗೂ 'ಹರಿಜನ' ಎನ್ನುವ ಇಂಗ್ಲಿಷ್ ಪತ್ರಿಕೆಗಳನ್ನು ಆರಂಭಿಸಿದರು.

ಹೀಗೆ ಆರಂಭವಾದ ಅವರ ಬರಹಗಳ ಹರಿವು ಅವರ ಬದುಕಿನ ಕೊನೆಯವರೆವಿಗೂ ನಡೆಯಿತು. ಅವರ ಪತ್ರಿಕಾ ಬರಹಗಳಲ್ಲಿ ಮುಖ್ಯವಾಗಿ ದೇಶದ ಜನತೆಗೆ ಬದುಕಿನ ಸರಳತೆ, ಸದಾಚಾರ, ಸುತ್ತಲಿನ ಪರಿಸರ ಸ್ವಚ್ಛತೆ ಬಗ್ಗೆ ಇರುತಿತ್ತು.

ಜನರು ತಮಗೆ ಅವಶ್ಯವಿರುವ ನೂಲನ್ನು ಚರಕ ಬಳಸಿ ನೂಲುವ ರೀತಿಯನ್ನು, ಖಾದಿ ನೂಲಿನಿಂದ ಚರಕ ಉಪಯೋಗಿಸಿ ಬಟ್ಟೆ ನೇಯುವ, ಬಟ್ಟೆಯಿಂದ ಉಡುಪು, ಟೋಪಿ ಹೊಲೆದು ಕೊಳ್ಳುವ ಬಗ್ಗೆ ತಿಳಿಸಿಕೊಡುತ್ತಿದ್ದರು. ಆಡಿನ ಹಾಲಿನ ಉಪಯುಕ್ತತೆ ಬಗ್ಗೆ, ಗ್ರಾಮೀಣರು ಹತ್ತಿ ಬದಲು ರಾಗಿ ಬೆಳೆಯಲು ತಮ್ಮ ಬರಹಗಳಲ್ಲಿ ಪ್ರೇರೆಪಿಸುತ್ತಿದ್ದರು.

ಈ ರೀತಿಯಾಗಿ ತಮ್ಮ ಬರಹಗಳ ಮೂಲಕ ಜನರಿಗೆ ಸಂದೇಶ ನೀಡುತ್ತಿದ್ದ ಬಾಪು ಅವರು ಪತ್ರಕರ್ತರಿಗೂ ತಿಳಿ ಹೇಳುತಿದ್ದರು. ಪತ್ರಿಕೋದ್ಯಮದ ಏಕೈಕ ಗುರಿ ಸೇವೆಯಾಗಿರಬೇಕೆ ಹೊರತು ವ್ಯವಹಾರ ಆಗಬಾರದು. ಪತ್ರಕರ್ತರಾದವರು ಸ್ವಯಂ ನಿಯಂತ್ರಣ ಮತ್ತು ಸ್ವಯಂ ಶಿಸ್ತುಗಳನ್ನು ಅಳವಡಿಸಿಕೊಳ್ಳಬೇಕು.

ಯಾವುದೇ ಘಟನೆಯನ್ನು ವರದಿ ಮಾಡುವ ಮೊದಲು ಎಲ್ಲಾ ಮಗುಲನ್ನು ಅರಿತು, ಜನರಿಗೆ ಸತ್ಯ ಸಂಗತಿಯನ್ನು ವರದಿ ಮಾಡಬೇಕು. ನಿಮ್ಮ ಭಾಷೆ ಮಿತವಾಗಿರಲಿ, ವರದಿ ದಿಟವಾಗಿರಲಿ. ಅವರ ಈ ಮಾತುಗಳನ್ನು ಇಂದಿನ ಪತ್ರಿಕೋದ್ಯಮಿಗಳು ಅರಿಯಬೇಕಿದೆ.

▸▸ ಎಚ್.ಕೆ. ಪಾಟೀಲ

...1ನೇ ಪುಟದಿಂದ

ಅಧ್ಯಕ್ಷರಾದ ಶ್ರೀ ಹರೀಶ್ ಆಚಾರ್ಯ ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಸಹಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ತರಬೇತಿಯ ಉಪನ್ಯಾಸಕರಿಂದ ತಮ್ಮ ಸಮಸ್ಯೆಗಳನ್ನು ಹೇಳಿ ಅವರಿಂದ ಪರಿಹಾರ ಕಂಡುಕೊಳ್ಳಬಹುದೆಂದು ತಿಳಿಸಿದರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಹಾಮಂಡಳದ ನಿರ್ದೇಶಕರಾದ ಶ್ರೀ ರಾಜಕುಮಾರ ಬಾದವಾಡಗಿ ರವರು ಮಾತನಾಡಿ ನಮ್ಮ ನೆಚ್ಚಿನ ನಾಯಕರು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾದ ಮಾನ್ಯ ಶ್ರೀ ಎಚ್.ಕೆ.ಪಾಟೀಲರ ಅಧ್ಯಕ್ಷತೆಯಲ್ಲಿ ಮಹಾಮಂಡಳವು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಸಭೆಗೆ ತಿಳಿಸಿದರು.ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಷಣ್ಮುಖಪ್ಪ ಮುಚ್ಚಂಡಿ ಯವರು ಮಾತನಾಡಿ ಮಹಾಮಂಡಳದ ಕಾರ್ಯಚಟುವಟಿಕೆಗಳ ಬಗ್ಗೆ ವಿವರವಾಗಿ ಸಭೆಗೆ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀ ವಿಜಯಾನಂದ ಬ. ಹೊಸಕೋಟಿ, ಉಡುಪಿ ಲಿಕೋ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ. ಕೃಷ್ಣ, ಉಡುಪಿ ಟೌನ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಜಯಪ್ರಕಾಶ ಕೆದ್ಲಾಯ, ಉಡುಪಿ ನಾರಾಯಣ ಗುರು ಸಹಕಾರ ಬ್ಯಾಂಕಿನ ಶ್ರೀ ಹರಿಶ್ಚಂದ್ರ ಅಮೀನ್, ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್, ಉಪನ್ಯಾಸಕರಾದ ಶ್ರೀ ತಿಪ್ಪೇಶ ಅಂಗಡಿ ಹಾಗೂ ಮಹಾಮಂಡಳದ ಪ್ರಭಾರ ಅಧೀಕ್ಷಕರಾದ ಶ್ರೀ ಆರ್.ಎಚ್.ಕುಮಾರ ರವರುಗಳು ಭಾಗವಹಿಸಿದ್ದರು.

ಪ್ರಾರಂಭದಲ್ಲಿ ವಿಚಾರ ಸಂಕಿರಣಕ್ಕೆ ಆಗಮಿಸಿದ್ದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳನ್ನು ಹಾಗೂ ಗಣ್ಯರನ್ನು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ಸ್ವಾಗತಿಸಿದರು. ಕೊನೆಯಲ್ಲಿ ಲಿಕೋ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಶಶಿಕಲಾ ವಂದನಾರ್ಪಣೆಯನ್ನು ಮಾಡಿದರು.

ಈ ವಿಚಾರ ಸಂಕಿರಣದಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಸುಮಾರು 160ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ, ವಿಚಾರ ಸಂಕಿರಣದ ಸದುಪಯೋಗವನ್ನು ಪಡೆದುಕೊಂಡರು.

# ಸಿದ್ಧಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ 31ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ



ತುಮಕೂರು ನಗರದ ಸಿದ್ಧಗಂಗಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಪರಮಪೂಜ್ಯ ಡಾ॥ ಶ್ರೀ ಶ್ರೀ ಶಿವಕುಮಾರಮಹಾಸ್ವಾಮಿಗಳವರ ಅಮೃತ ಹಸ್ತದಿಂದ ದಿನಾಂಕ : 02.02.1995ರಲ್ಲಿ ಪ್ರಾರಂಭವಾಗಿ 30ನೇ ವರ್ಷದಲ್ಲಿ ಮುನ್ನಡೆಯುತ್ತಿದ್ದು 31ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ಎಸ್ ಐಟಿ ಬಿರ್ಲಾ ಸಭಾಂಗಣ, ತುಮಕೂರು ಇಲ್ಲಿ ದಿನಾಂಕ : 15.09.2024ರ ಭಾನುವಾರ ದಂದು ನೆರವೇರಿತು.

ಇದರ ಅಧ್ಯಕ್ಷತೆಯನ್ನು ವಹಿಸಿದ್ದ ಅಧ್ಯಕ್ಷರಾದ ಶ್ರೀ ಟಿ. ಕೆ.ನಂಜುಂಡಪ್ಪವರು ಮಾತನಾಡಿ ನಮ್ಮ ಬ್ಯಾಂಕು ತುಮಕೂರಿನ ಪ್ರತಿಷ್ಠಿತ ಬ್ಯಾಂಕುಗಳಲ್ಲಿ ಒಂದಾಗಿದ್ದು ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ. 9,76,90,419.93 ಲಾಭ ಗಳಿಸಿ ಸಹಕಾರ ಕ್ಷೇತ್ರದಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು ವರದಿ ಸಾಲಿನಲ್ಲಿ ನಿವ್ವಳ ಎನ್‌ಪಿಎ ಶೇಕಡ ಶೂನ್ಯ ಆಗಿದೆ. ವರದಿ ಸಾಲಿನ ನಿವ್ವಳ ಲಾಭ ಅವಕಾಶಗಳ ನಂತರ ರೂ. 2,77,01,237.93 ಇದ್ದು, 15% ಡಿವಿಡೆಂಡ್ ಅನ್ನು ಘೋಷಿಸಲಾಯಿತು. ಭಾರತೀಯ ರಿಜರ್ವ್ ಬ್ಯಾಂಕಿನಿಂದ **(FSWM)** "ಆರ್ಥಿಕವಾಗಿ ಸದೃಢ ಮತ್ತು ಉತ್ತಮವಾಗಿ ಕಾರ್ಯ ನಿರ್ವಹಿಸುವ ಪಟ್ಟಣ ಸಹಕಾರ ಬ್ಯಾಂಕು" ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಸಭೆಗೆ ತಿಳಿಸಿದರು.

ಈ ಸಭೆಯಲ್ಲಿ 2023–2024ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಯಲ್ಲಿ ಶೇ.90%ಕ್ಕಿಂತ ಹೆಚ್ಚಿನ ಅಂಕ ಪಡೆದು ಉತ್ತೀರ್ಣರಾದ ಸದಸ್ಯರ ಮಕ್ಕಳುಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಈ ಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಟಿ.ಕೆ. ನಂಜುಂಡಪ್ಪನವರು, ಉಪಾಧ್ಯಕ್ಷರಾದ ಶ್ರೀ ಕೆ.ಎಸ್. ಶಂಕರಯ್ಯನವರು ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷರು ಮತ್ತು ಬ್ಯಾಂಕಿನ ನಿರ್ದೇಶಕರಾದ ಶ್ರೀ ಬಿ.ಎಸ್. ರುದ್ರೇಶಯ್ಯನವರು, ನಿರ್ದೇಶಕರುಗಳಾದ ಶ್ರೀ ಡಾ॥ ಎಸ್. ಪರಮೇಶ್‌ರವರು, ಶ್ರೀ ಎಸ್. ವಿಶ್ವನಾಥಯ್ಯನವರು, ಶ್ರೀ ಡಾ॥ ಆರ್.ಸಿ. ಪುಟ್ಟಬುದ್ಧಿರವರು, ಶ್ರೀ ಟಿ.ಎಂ. ಸ್ವಾಮಿರವರು, ಶ್ರೀ ಆರ್. ಚಿಕ್ಕಯ್ಯನವರು, ಶ್ರೀ ಎಸ್. ವಿಶ್ವನಾಥ್‌ರವರು ಚಾರ್ಟಡ್ ಅಕೌಂಟೆಂಟ್, ಶ್ರೀ ಕೆ.ಎಂ. ಸ್ವಾಮಿರವರು, ಶ್ರೀ ರಾಮಯ್ಯನವರು, ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಾದ ಶ್ರೀ ಕೆ.ಸಿ. ಶಿವಗಂಗಯ್ಯನವರು, ಶ್ರೀ ಎಲ್. ಬಸವರಾಜುರವರು, ಶ್ರೀ ಸಿ. ಆರ್. ರಮೇಶ್‌ರವರು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಹೆಚ್.ಕೆ. ಶಿವಪ್ರಕಾಶ್‌ರವರು, ಬ್ಯಾಂಕಿನ ಸದಸ್ಯರುಗಳು ಮತ್ತು ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

## ಶ್ರೀಗಳಿಗೆ ಪಾದಪೂಜೆ ಮಠದ ದಾಸೋಹ ನಿಧಿಗೆ ಕಾಣಿಕೆ



ಸಿದ್ಧಗಂಗಾ ಅರ್ಬನ್ ಕೋ ಆಪರೇಟಿವ್ ಬ್ಯಾಂಕು ತನ್ನ 31ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಅಂಗವಾಗಿ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಪಾದಪೂಜೆಯನ್ನು ನೆರವೇರಿಸಿ ಶ್ರೀ ಸಿದ್ಧಗಂಗಾ ಮಠದ ದಾಸೋಹ ನಿಧಿಗಾಗಿ ಕಾಣಿಕೆಯನ್ನು ಸಮರ್ಪಿಸಲಾಯಿತು.

ಅಧ್ಯಕ್ಷರಾದ ಶ್ರೀ ಟಿ.ಕೆ. ನಂಜುಂಡಪ್ಪನವರು, ಉಪಾಧ್ಯಕ್ಷರಾದ ಶ್ರೀ ಕೆ.ಎಸ್. ಶಂಕರಯ್ಯನವರು ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷರಾದ ಮತ್ತು ನಿರ್ದೇಶಕರಾದ ಶ್ರೀ ಬಿ.ಎಸ್. ರುದ್ರೇಶಯ್ಯನವರು, ನಿರ್ದೇಶಕರುಗಳಾದ ಡಾ॥ ಎಸ್. ಪರಮೇಶ್‌ರವರು, ಶ್ರೀ ಎಸ್. ವಿಶ್ವನಾಥಯ್ಯನವರು, ಡಾ॥ ಆರ್.ಸಿ. ಪುಟ್ಟಬುದ್ಧಿರವರು, ಶ್ರೀ ಟಿ.ಎಂ. ಸ್ವಾಮಿರವರು, ಶ್ರೀ ಆರ್. ಚಿಕ್ಕಯ್ಯನವರು, ಶ್ರೀ ಎಸ್. ವಿಶ್ವನಾಥ್‌ರವರು (CA), ಶ್ರೀ ಕೆ.ಎಂ. ಸ್ವಾಮಿರವರು, ಶ್ರೀ ರಾಮಯ್ಯನವರು, ಶ್ರೀಮತಿ ಮಂಜುಳಪ್ರಸಾದ್‌ರವರು, ಶ್ರೀಮತಿ ಡಾ॥ ಎಸ್. ರೇಣುಕಲತಾರವರು, ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಾದ ಶ್ರೀ ಕೆ.ಸಿ. ಶಿವಗಂಗಯ್ಯನವರು, ಶ್ರೀ ಸಿ.ಆರ್.ರಮೇಶ್‌ರವರು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಹೆಚ್.ಕೆ. ಶಿವಪ್ರಕಾಶ್‌ರವರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ವಿಜಯಪುರದ ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕಿನ 30ನೇ ವಾರ್ಷಿಕ ಸರ್ವಸಾಧಾರಣ ಸಭೆ

ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕ್, ವಿಜಯಪುರ ಇದರ 30ನೇ ವಾರ್ಷಿಕ ಸರ್ವಸಾಧಾರಣ ಸಭೆ ದಿನಾಂಕ : 16.09.2024 ರಂದು ಲಕ್ಷ್ಮೀ ನಗರ ಶಾಖೆಯ ಸಭಾಭವನದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಮಲ್ಲಮ್ಮ ಶಿ. ಯಾಳವಾರ ಇವರ ಅಧ್ಯಕ್ಷತೆಯಲ್ಲಿ ಜರುಗಿತು.



ಸಭೆಯ ಎಲ್ಲ ಸದಸ್ಯರಿಗೆ ಬ್ಯಾಂಕಿನ ಅಧ್ಯಕ್ಷರು ಸ್ವಾಗತ ಕೋರಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಬ್ಯಾಂಕು ದಿನಾಂಕ : 31.03.2024ಕ್ಕೆ ಇದ್ದಂತೆ ಒಟ್ಟು ಸದಸ್ಯರು 11548, ಷೇರು ಬಂಡವಾಳ ರೂ. 699.15 ಲಕ್ಷ, ಒಟ್ಟು ಸ್ವಂತ ನಿಧಿಗಳು ರೂ. 1355.91 ಲಕ್ಷ, ಠೇವಣಿಗಳು ರೂ. 14672.76 ಲಕ್ಷ, ಗುಂತಾವಣೆಗಳು ರೂ. 5505.97 ಲಕ್ಷ, ಸಾಲ ವಿತರಿಸಿದ್ದು ರೂ. 10267.77 ಲಕ್ಷ, ಒಟ್ಟು ದುಡಿಯುವ ಬಂಡವಾಳ ರೂ. 16727.83 ಲಕ್ಷ, ಒಟ್ಟು ಶಾಖೆಗಳು 8, ನಿವಳ ಲಾಭ ರೂ. 136.42 ಲಕ್ಷ, ಅಡಿಟ್ ವರ್ಗ ಅ, ಎನ್‌ಪಿಎ 0%. ಈ ರೀತಿ ಬ್ಯಾಂಕು ಹಣಕಾಸಿನ ಪರಿಸ್ಥಿತಿ ಹೊಂದಿರುತ್ತದೆ ಎಂದು ಹೇಳುತ್ತಾ, ಬ್ಯಾಂಕು ಅಭಿವೃದ್ಧಿಯತ್ತ ಸಾಗುತ್ತಿದ್ದು, ಈ ಎಲ್ಲ ಪ್ರಗತಿಗೆ ಬ್ಯಾಂಕಿನ ಎಲ್ಲ ಸದಸ್ಯರು ಮತ್ತು ಗ್ರಾಹಕರ ಸಹಕಾರವೇ ಕಾರಣ ಎಂದರು.

ಬ್ಯಾಂಕಿನ ವಾರ್ಷಿಕ ವರದಿ ಅಢಾವೆ ಪತ್ರಿಕೆ ಮತ್ತು ಲಾಭಹಾನಿ ಪತ್ರಿಕೆಗಳನ್ನು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಲಕ್ಷ್ಮೀ ಆರ್.ಬಳಗೊಂಡ ಓದಿ ಹೇಳಿದರು. ಶ್ರೀಮತಿ ರೇಣುಕಾ ಎಸ್. ದೇಸಾಯಿ ಸಿ.ಇ.ಓ ಇವರು ಪ್ರತಿಭಾನ್ವಿತ ಸದಸ್ಯರ ಮಕ್ಕಳಿಗೆ ಆಡಳಿತ ಮಂಡಳಿಯ ಎಲ್ಲ ಸದಸ್ಯರ ಮೂಲಕ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಸಿಕೊಟ್ಟರು ಹಾಗೂ ಶ್ರೀಮತಿ ರಾಜೇಶ್ವರಿ ಬಿ.ಪಾಟೀಲ ವಂದನಾರ್ಪಣೆ ಮಾಡಿದರು. ಶ್ರೀಮತಿ ಮೈತ್ರಾ ಎಸ್. ಬಾಗೇವಾಡಿ ವ್ಯವಸ್ಥಾಪಕರು ಪ್ರಧಾನ ಶಾಖೆ ಇವರು ಕಾರ್ಯಕ್ರಮ ನಿರೂಪಣೆ ಮಾಡಿದರು.

# ಶಿಗ್ಗಾಂವ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ : 28ನೇ ವಾರ್ಷಿಕ ಮಹಾಸಭೆ

ಸನ್ 2023-24ನೇ ಸಾಲಿನ 28ನೇ ವಾರ್ಷಿಕ ಮಹಾಸಭೆ ದಿನಾಂಕ : 14.09.2024 ರಂದು ಶನಿವಾರ ಬೆಳಗ್ಗೆ 11.00 ಗಂಟೆಗೆ ಬ್ಯಾಂಕಿನ ಸಭಾಂಗಣದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಜಗದೀಶ ಚ ತೊಂಡಿಹಾಳ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಾರಂಭದಲ್ಲಿ ಕೂಡಿದ ಸಭೆಯು ವರದಿ ವರ್ಷದಲ್ಲಿ ಲಿಂಗೈಕ್ಯರಾದ ಸದಸ್ಯರುಗಳಿಗೆ ಎರಡು ನಿಮಿಷ ಮೌನಾ ಆಚರಿಸುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಿತು.



ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಡಾ॥ ಪ್ರಭುಗೌಡ ರು. ಪಾಟೀಲ ಇವರು ಪ್ರಾಸ್ತಾವಿಕವಾಗಿ ಮಾತನಾಡಿ ಬ್ಯಾಂಕು ನಡೆದು ಬಂದ ಬಗ್ಗೆ ವಿವರಿಸಿದರು. ಬ್ಯಾಂಕಿನ ಸಂಸ್ಥಾಪನೆಯಲ್ಲಿ ಸಹಕಾರ ನೀಡಿದ ಎಲ್ಲ ಸಹಕಾರಿಗಳನ್ನು ಗುಣಗಾನ ಮಾಡಿದರು. ಬ್ಯಾಂಕಿನ ಅಧ್ಯಕ್ಷರು ವರದಿ ವಾಚನಮಾಡಿದರು ಸನ್ 2023-24ನೇ ಸಾಲಿನಲ್ಲಿ ಬ್ಯಾಂಕು ರೂ.47.08 ಲಕ್ಷ ಲಾಭವನ್ನು ಗಳಿಸಿದೆ ಎಂದು ತಿಳಿಸಿದರು.

ಸನ್ 2023-24ನೇ ಸಾಲಿಗೆ ಶೇರುಗಳ ಮೇಲೆ ಶೇಕಡಾ 13 ರಷ್ಟು ಡಿವಿಡೆಂಡ್ ಘೋಷಣೆ ಮಾಡಲಾಯಿತು. ಮಹಾಸಭೆಯು 2023-24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಯಲ್ಲಿ ಹೆಚ್ಚಿನ ಅಂಕ ಪಡೆದು ತೇರ್ಗಡೆಯಾದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸತ್ಕರಿಸಲಾಯಿತು. ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಶಿವಾನಂದ ಪಾಟೀಲ ನಿರೂಪಿಸಿ ವಂದಿಸಿದರು.

ಮಹಾಸಭೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಅಶೋಕ ಎನ್ ಬಂಕಾಪೂರ, ನಿರ್ದೇಶಕರಾದ ಶ್ರೀ ಜನಾರ್ಧನ ನಾರಾಯಣರಾವ್ ಬ್ರಹ್ಮಾವರ, ಶ್ರೀ ತ್ರಿಲೋಚನಯ್ಯ ವೀರಯ್ಯ ಸುರಗಿಮಠ, ಶ್ರೀ ಸಿದ್ಧಾರ್ಥ ಹನುಮಂತಗೌಡ ಪಾಟೀಲ, ಶ್ರೀ ಕುಮಾರ ಮಲ್ಲಿಕಾರ್ಜುನ ಹೆಸರೂರ, ಶ್ರೀ ಚಿದಾನಂದ ಮಲಕಪ್ಪ ಕಮ್ಮಾರ, ಶ್ರೀ ಮಾಲತೇಶ ಫಕ್ಕೀರಪ್ಪ ಗೌಳಿ, ಶ್ರೀ ಧರ್ಮಪ್ಪ ಫಕ್ಕೀರಪ್ಪ, ಧಾರವಾಡ, ಡಾ॥ ಬಿ.ಹೆಚ್. ವೀರಣ್ಣ, ಶ್ರೀ ಉಮೇಶ ಬ. ಗೌಳಿ, ಶ್ರೀ ಧೀರೇಂದ್ರ ಮಂಜುನಾಥ ಕುಂದಾಪೂರ, ಶ್ರೀಮತಿ ಕಾಶವ್ವ ಬಸವರಾಜ ಹಾವೇರಿ, ಶ್ರೀಮತಿ ಚನ್ನಬಸವ್ವ ನಿಂಗಪ್ಪ ಬಡ್ಡಿ ಉಪಸ್ಥಿತರಿದ್ದರು.

### ಮಹಾಲಕ್ಷ್ಮೀ ಬ್ಯಾಂಕಿನ 46ನೇ ವಾರ್ಷಿಕ ಮಹಾಸಭೆ :

# 2023-24 ಸಾಲಿನಲ್ಲಿ ರೂ. 16.73 ಕೋಟಿ ವ್ಯವಹಾರಿಕ ಲಾಭ ರಾಷ್ಟ್ರೀಕೃತ ಬ್ಯಾಂಕಿಗೆ ಸರಿಸಮನಾಗಿ ಆಧುನಿಕ ಬ್ಯಾಂಕಿಂಗ್ ತಂತ್ರಜ್ಞಾನದೊಂದಿಗೆ ಗ್ರಾಹಕರ ಸೇವೆಗೆ ಬದ್ಧ : ಯಶ್‌ಪಾಲ್ ಸುವರ್ಣ




ಮಹಾಲಕ್ಷ್ಮೀ ಕೋ ಓಪರೇಟಿವ್ ಬ್ಯಾಂಕ್ ಲಿ., ಉಡುಪಿ ಇದರ 2023-24ರ ಸಾಲಿನ 46ನೇ ವಾರ್ಷಿಕ ಮಹಾಸಭೆಯು ದಿನಾಂಕ : 16-09-2024ರಂದು ಬ್ಯಾಂಕಿನ ಅಧ್ಯಕ್ಷರಾದ ಉಡುಪಿ ಶಾಸಕ ಶ್ರೀ ಯಶ್‌ಪಾಲ್ ಎ ಸುವರ್ಣರವರ ಅಧ್ಯಕ್ಷತೆಯಲ್ಲಿ ಉಡುಪಿ ಪುರಭವನದಲ್ಲಿ ಜರುಗಿತು.

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಯಶ್‌ಪಾಲ್ ಎ ಸುವರ್ಣರವರು ಸರ್ವಸದಸ್ಯರನ್ನು ಸ್ವಾಗತಿಸಿ, ಬ್ಯಾಂಕ್ ನಿರಂತರ 14 ವರ್ಷಗಳಿಂದ ಅತಿಹೆಚ್ಚು ಡಿವಿಡೆಂಡ್ ನೀಡುವ ಕರಾವಳಿ ಭಾಗದ ಪಟ್ಟಣ ಸಹಕಾರಿ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು, ಪ್ರಸಕ್ತ ಸಾಲಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿಗೆ ಸರಿಸಮನಾಗಿ ಡಿಜಿಟಲ್ ಬ್ಯಾಂಕಿಂಗ್ ತಂತ್ರಜ್ಞಾನದೊಂದಿಗೆ ಯುಪಿಐ ಸೌಲಭ್ಯವನ್ನು ಅಳವಡಿಸಿಕೊಂಡು ಗ್ರಾಹಕಸ್ನೇಹಿ ಸೇವೆ ನೀಡುತ್ತಿದೆ. ವರದಿ ವರ್ಷದಲ್ಲಿ ಆದಾಯ ತೆರಿಗೆಗೆ ಹಾಗೂ ನಿಯಮದಂತೆ ಇತರ ಸಲುವಳಿಗಳಿಗೆ ಅನುವು ಮಾಡುವ ಮೊದಲು ರೂ.16.73 ಕೋಟಿ ವ್ಯವಹಾರಿಕ ಲಾಭ ಗಳಿಸಿದೆ.

ಈ ಸಂದರ್ಭದಲ್ಲಿ ದಕ್ಷಿಣ ಕನ್ನಡ ಸಂಸದರಾದ ಕ್ಯಾಪ್ಟನ್ ಬ್ರಿಜೇಶ್ ಚೌಟ, ವಿಧಾನ ಪರಿಷತ್ ಸದಸ್ಯರಾದ ಡಾ। ಧನಂಜಯ ಸರ್ಜಿ, ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀಮತಿ ಮಾಲಾ ಬಿ.ನಾರಾಯಣ ರಾವ್, ಉಡುಪಿ ನಗರಸಭೆಯ ಅಧ್ಯಕ್ಷರಾದ ಪ್ರಭಾಕರ ಪೂಜಾರಿ, ಉಪಾಧ್ಯಕ್ಷರಾದ ಶ್ರೀಮತಿ ರಜನಿ ಹೆಬ್ಬಾರ್ ಹಾಗೂ ಶೈಕ್ಷಣಿಕ ಕ್ಷೇತ್ರದ ಸಾಧಕರಾದ ನೀರಜ ಎಸ್. ಸುವರ್ಣ, ನಮ್ರುತ ಎಚ್.ಕುಂದರ್ ರವರಿಗೆ ಬ್ಯಾಂಕಿನ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಗೀತಾನಂದ ಫೌಂಡೇಶನ್ ಪ್ರವರ್ತಕರಾದ ಆನಂದ ಸಿ.ಕುಂದರ್, ಮಲ್ಪೆ ಮೀನುಗಾರರ ಸಂಘದ ಅಧ್ಯಕ್ಷರಾದ ದಯಾನಂದ ಸುವರ್ಣ, ಮಾಜಿ ಸಚಿವರಾದ ಶ್ರೀ ಪ್ರಮೋದ್ ಮಧ್ವರಾಜ್, ಮೊಗವೀರ ಮಹಾಜನ ಸಂಘದ ಅಧ್ಯಕ್ಷರಾದ ಶ್ರೀ ಜಯ ಸಿ.ಕೋಟ್ಯಾನ್, ಮೀನುಗಾರ ಮುಖಂಡರಾದ ಆನಂದ ಪಿ. ಸುವರ್ಣ, ರಾಮಚಂದ್ರ ಕುಂದರ್, ಶಿವಪ್ಪ ಕಾಂಚನ್, ಗುಂಡು ಅಮೀನ್, ಮೋಹನ್ ಬೆಂಗ್ರೆ, ಶ್ರೀಮತಿ ಬೇಬಿ ಸಾಲ್ಯಾನ್, ಉದಯ ಹಟ್ಟಿಯಂಗಡಿ, ಸುಮಿತ್ರ ಕುಂದರ್, ಸಹಕಾರಿ ಇಲಾಖೆಯ ಅಧಿಕಾರಿ ಸುಧೀರ್, ಬ್ಯಾಂಕಿನ ಉಪಾಧ್ಯಕ್ಷರಾದ ವಾಸುದೇವ ಸಾಲ್ಯಾನ್, ನಿರ್ದೇಶಕರುಗಳಾದ ಶಶಿಕಾಂತ ಬಿ ಕೋಟ್ಯಾನ್, ಶೋಭೇಂದ್ರ ಸಸಿಹಿತ್ಲು, ಕೆ ಸಂಜೀವ ಶ್ರೀಯಾನ್, ವಿನಯ ಕರ್ಕೇರ, ನಾರಾಯಣ ಟಿ ಅಮೀನ್, ಸುರೇಶ್ ಬಿ ಕರ್ಕೇರ, ಶಿವರಾಮ ಕುಂದರ್, ಶ್ರೀಮತಿ ವನಜಾ ಜೆ ಪುತ್ರನ್, ಸದಾನಂದ ಬಳ್ಕೂರು, ವೃತ್ತಿಪರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ, ಹಾಗೂ ಬ್ಯಾಂಕಿನ ವ್ಯವಸ್ಥಾಪನಾ ನಿರ್ದೇಶಕರಾದ ಶ್ರೀ ಶರತ್ ಕುಮಾರ್ ಶೆಟ್ಟಿ ಎನ್ ಮೊದಲಾದವರು ಉಪಸ್ಥಿತರಿದ್ದರು.



## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ

ತುಮಕೂರಿನ ಸಿದ್ಧಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ತನ್ನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಹೆಚ್.ಕೆ. ಶಿವಪ್ರಕಾಶ್ ರವರು ಮಹಾಮಂಡಳದ ಪ್ರಭಾರ ಅಧೀಕ್ಷಕರಾದ ಶ್ರೀ ಆರ್. ಹೆಚ್. ಕುಮಾರ್‌ರವರಿಗೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬ್ಯಾಂಕಿನ ಸಿಬ್ಬಂದಿ ಎ.ಎಸ್. ರುದ್ರೇಶ್ ಉಪಸ್ಥಿತರಿದ್ದರು.

# ಕರ್ನಾಟಕ ಸಹಕಾರ ಸಂಘಗಳ ಮತ್ತು ಬ್ಯಾಂಕುಗಳ ಸಾಲ ವಸೂಲಾತಿ ಕ್ರಮಗಳ ಕೈಪಿಡಿ

## (ದಾವಾ ಹೂಡುವ ಕ್ರಮ, ಅಮಲ್ಜಾರಿ ಕ್ರಮಗಳು ಮತ್ತು ಸಂಬಂಧಿಸಿದ ಎಲ್ಲಾ ಮಾದರಿ ನಮೂನೆಗಳ ಸಹಿತ)

**ಕೃಷ್ಣ ವಿ. ಗರಡೀಮನಿ,** ಸಹಾಯಕ ಪ್ರಧಾನ ವ್ಯವಸ್ಥಾಪಕರು/ಮಾರಾಟಾಧಿಕಾರಿಗಳು,
ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್., ಸೌತ್ ಎಂಡ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20 (9880453464)

...ಹಿಂದಿನ ಸಂಚಿಕೆಯಿಂದ

**ಅಮಲ್ಜಾರಿ ಕ್ರಮಗಳು / ಅಮಲ್‌ಬಜಾವಣೆ**

**(Execution of Co-operative decrees)**

**ನ್ಯಾಯಾಲಯದ ತೀರ್ಪು :** ಸುಸ್ತಿದಾರನ ಆಸ್ತಿಯನ್ನು ಸಂಘವು ಖರೀದಿಸಿದ್ದರೆ ನಂತರ ಸುಸ್ತಿದಾರನು ಸಾಲದ ಪೂರ್ತಾ ಬಾಕಿ ಮೊತ್ತವನ್ನು ಪಾವತಿಸಿದರೆ ಆ ಆಸ್ತಿಯನ್ನು ಅವನಿಗೆ ವಾಪಾಸ್ಸು ಕೊಡಬೇಕೆಂದು ಠರಾವು ಆದೇಶ ಮಾಡಿದ್ದರೆ ಸಾಲಗಾರನು ಸಾಲ ತೀರಿಸಿದ ಕೂಡಲೇ ಅವನಿಗೆ ಸಂಘವು ಆಸ್ತಿಯನ್ನು ಬಿಟ್ಟು ಕೊಡಲು ಬದ್ಧವಾಗಿರುತ್ತದೆ.(ವ್ಯವಸಾಯ ಸೇವಾ ಸಹಕಾರ ಸಂಘ ನಿ., / ಎನ್ ಯರಿಸ್ವಾಮಿ 1990(2) ಎಂ.ಎಲ್.ಜೆ 173)

**8. ಹರಾಜು / ಏಲಂ ಮಾಡಿದ ಸ್ಥಿರಾಸ್ತಿಯನ್ನು ಖರೀದಿದಾರರ ಸ್ವಾಧೀನ (ಕಬ್ಜಾ) ಕೊಡಿಸುವುದು.**

ಸಾರ್ವಜನಿಕ ಬಹಿರಂಗ ಹರಾಜಿನಲ್ಲಿ ಸ್ಥಿರಾಸ್ತಿಯನ್ನು ಖರೀದಿ ಮಾಡಿದವರಿಗೆ ಅಥವಾ ಡಿಕ್ರಿದಾರನಿಗೆ ಆಸ್ತಿಯು ವರ್ಗಾವಣೆ ಆದಂತಹ ಸಂದರ್ಭದಲ್ಲಿ ಆಂತಹ ಆಸ್ತಿಯನ್ನು ಖರೀದಿದಾರರು ಅಥವಾ ಡಿಕ್ರಿದಾರರು ಸ್ವಾಧೀನ (ಕಬ್ಜಾ) ಕೊಡಿಸುವಂತೆ ವಸೂಲಾತಿ ಅಧಿಕಾರಿಯವರಲ್ಲಿ ಮನವಿ ಮಾಡಿಕೊಳ್ಳಬೇಕು.ಆಗ ವಸೂಲಾತಿ ಅಧಿಕಾರಿ ಸ್ವಾಧೀನ ಕೊಡಿಸುವ ಬಗ್ಗೆ ಮಾರಾಟಾಧಿಕಾರಿಗಳಿಗೆ ಸೂಕ್ತ ಅಧಿಕಾರ ಕೊಟ್ಟು ಸಂಬಂಧಪಟ್ಟವರಿಗೆ ಆದೇಶಿಸಬೇಕು. ಈ ಬಗ್ಗೆ ಕಲಂ 128ಬಿ ನಲ್ಲಿ ಪೋಲೀಸರು ನಿಬಂಧಕರು ಅಥವಾ ಅವರ ಅಧೀನಾಧಿಕಾರಿಗಳಿಗೆ ನೇರವು ನೀಡಬೇಕು ಮತ್ತು ಅದು ಅವರ ಕರ್ತವ್ಯವಾಗಿರುತ್ತದೆ ಎಂದು ತಿಳಿಸಲಾಗಿದೆ. ಆದರೆ ಹೀಗೆ ಮಾಡುವಾಗ ಮಾರಾಟಾಧಿಕಾರಿಯವರು ಸಾಲಗಾರರಿಗೆ ಅಥವಾ ಆಸ್ತಿಯಲ್ಲಿ ಹಿತ ಸಂಬಂಧವುಳ್ಳವರು ಅಂದರೆ ಬಾಡಿಗೆ / ಲೀಸ್‌ದಾರರಿಗೆ 15 ದಿನಗಳ ಅವಧಿಯ ನೋಟೀಸು ಕೊಟ್ಟು ತೆರವು ಮಾಡಲು ತಿಳಿಸಿ, ತಪ್ಪಿದ್ದಲ್ಲಿ ಹೊರಗೆ ಹಾಕಿ ಸ್ವಾಧೀನ ಕೊಡಿಸಲಾಗುವುದು ಎಂಬುದಾಗಿ ತಿಳಿಸಬೇಕು. ಆದಾಗ್ಯೂ ತೆರವು ಮಾಡದಿದ್ದಲ್ಲಿ ಪೋಲೀಸ್ ಮತ್ತು ಪಂಚರ ಸಮಕ್ಷಮ ಹೋಗಿ ದೈಹಿಕವಾಗಿ ಎಳೆದು ಹಾಕಿ ಸ್ವಾಧೀನ ಕೊಡಿಸಬೇಕು. ಈ ಬಗ್ಗೆ ಸೂಕ್ತ ಪಂಚನಾಮೆ ಮಾಡಿ ಸ್ವಾಧೀನಪಡಿಸಿಕೊಳ್ಳಬೇಕು. ಈ ಬಗ್ಗೆ ನಿಯಮ 38(ಎ) (8)(ಬಿ) ಮತ್ತು (ಸಿ) ನಲ್ಲಿ ಅವಕಾಶ ಇರುವುದನ್ನು ಮಾರಾಟಾಧಿಕಾರಿಗಳು ತಿಳಿದುಕೊಳ್ಳಬೇಕು.

**ನ್ಯಾಯಾಲಯದ ತೀರ್ಪು :** ಅಮಲ್ಜಾರಿ ಹರಾಜಿನಲ್ಲಿ ಆಸ್ತಿಯನ್ನು ಖರೀದಿಸಿದ 3ನೇ ಪಕ್ಷಗಾರನು ಅಮಲ್ಜಾರಿ ಕ್ರಮದ ಸಹಾಯವನ್ನು ತೆಗೆದುಕೊಳ್ಳಲೇಬೇಕೆಂಬ ಕಡ್ಡಾಯವೇನೂ ಇಲ್ಲ, ಅವನು ಆ ಆಸ್ತಿಯನ್ನು ವಶಪಡಿಸಿಕೊಳ್ಳಲು ದಾವಾ ಹೂಡಬಹುದು. (ಶಿವಾಜಿ / ವೈಜ್ಯನಾಥ ಐ.ಎಲ್.ಆರ್. 1977(1) ಕರ್ನಾಟಕ 405, 1977(1) ಕೆ.ಎಲ್.ಜೆ. 166).

**9. ಸರ್ಕಾರ ಮಂಜೂರು ಮಾಡಿದ ಸ್ಥಿರಾಸ್ತಿಗಳ ಮಾರಾಟ / ಏಲಂ ಮತ್ತು ನೋಂದಣಿ ವಿಧಾನ :**

ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಭೂಮಿಯನ್ನು / ಸ್ಥಿರಾಸ್ತಿಯನ್ನು ಮಂಜೂರು ಮಾಡಿ ಅದನ್ನು ಬೇರೆಯವರಿಗೆ ಪರಭಾರೆ ಅಥವಾ ವರ್ಗಾವಣೆ ಮಾಡಬಾರದಾಗಿ ನಿಷೇದ ಮಾಡಿರುತ್ತದೆ.ಈ ಬಗ್ಗೆ ಒಂದು ಕಾಯ್ದೆಯನ್ನು ಜಾರಿಗೆ ತಂದಿದೆ ಅದೇ Karnataka Scheduled Castes and Scheduled Tribes, (Prohibition of Transfer of Certain Land) Act, 1978 ಇದನ್ನು ಸಂಕ್ಷಿಪ್ತವಾಗಿ "PTCL" ಕಾಯ್ದೆ ಎಂದು ಕರೆಯುತ್ತಾರೆ.

PTCL ಕಾಯ್ದೆ ಕಲಂ 4ರ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸರ್ಕಾರದಿಂದ ಮಂಜೂರಾದ ಭೂಮಿ/ಸ್ಥಿರಾಸ್ತಿಯನ್ನು ಯಾವುದೇ ರೀತಿಯಿಂದಲೂ ಪರಭಾರೆ ಮಾಡುವಂತಿಲ್ಲ. ನ್ಯಾಯಾಲಯದ ಡಿಕ್ರಿ ಪಡೆದು ಏಲಂ ಮಾಡಿದರೂ ಪರಭಾರೆ / ವರ್ಗಾವಣೆ ಮಾಡುವಂತಿಲ್ಲ. ಆದರೆ ಅದೇ ಕಾಯ್ದೆ ಕಲಂ 7ರಲ್ಲಿ ಸರ್ಕಾರ, ಸ್ಥಳೀಯ ಪ್ರಾಧಿಕಾರ, ಬ್ಯಾಂಕ್ ಎಂದರೆ ಸಹಕಾರ ಸಂಘ / ಬ್ಯಾಂಕ್ ಎಂದು ವಿವರಣೆ ನೀಡಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಸಹಕಾರ ಸಂಘ / ಬ್ಯಾಂಕ್ ಇಂತಹ ಆಸ್ತಿಗಳನ್ನು ಏಲಂ ಮೂಲಕ ಪರಭಾರೆ ಮಾಡಬಹುದು ಎಂದಾಯಿತು.ಆದರೆ ಸರ್ಕಾರ ಮಂಜೂರು ಮಾಡಿದ ಭೂಮಿಯು/ಸ್ಥಿರಾಸ್ತಿಯು ಸಾಲ ನೀಡಿದ ಸಂಘ / ಬ್ಯಾಂಕಿಗೆ ನೋಂದಾಯಿತ ಅಡಮಾನವಾಗಿರಬೇಕು. ಆ ಭೂಮಿಯ / ಸ್ಥಿರಾಸ್ತಿಯ ಅಡಮಾನದ ಮೇಲೆ ಸಾಲ ನೀಡಿದ್ದು, ಸಾಲ ಸುಸ್ತಿಯಾಗಿ ದಾವಾ ಹೂಡಿ, ಡಿಕ್ರಿ ಪಡೆದಿರಬೇಕು ಮತ್ತು ಅಮಲ್ಜಾರಿ ಕ್ರಮ ಕೈಗೊಂಡು ನಿಯಮಾನುಸಾರ ಏಲಂ ಮಾಡಬೇಕು. ಏಲಂ ಆದ ನಂತರ ಅಂತಹ ಭೂಮಿ / ಸ್ಥಿರಾಸ್ತಿಯನ್ನು ಖರೀದಿದಾರರಿಗೆ ವರ್ಗಾವಣೆ ಮಾಡಬೇಕಾದರೆ PTCL ಕಾಯ್ದೆ ಕಲಂ 4(2)ರ ಪ್ರಕಾರ ಸರ್ಕಾರದ ಅನುಮತಿ ಅಂದರೆ ಕಂದಾಯ ಇಲಾಖೆಯ (ಜಿಲ್ಲಾಧಿಕಾರಿ) ಅನುಮತಿ ಪಡೆಯಬೇಕು ಈ ಎಲ್ಲಾ ವಿಧಿ ವಿಧಾನಗಳನ್ನು ಪಾಲಿಸಿದ ನಂತರ ಕಂದಾಯ ಇಲಾಖೆ ಪರಭಾರೆ ಮಾಡಲು ಕಡ್ಡಾಯವಾಗಿ ಅನುಮತಿ ನೀಡಲೇಬೇಕೆಂದು ಹೊನ್ನಾಳಿ ಪಿಕಾರ್ಡ್ ಬ್ಯಾಂಕ್ ವಿರುದ್ಧ ಜಿಲ್ಲಾಧಿಕಾರಿ, ದಾವಣಗೆರೆ ಈ ದಾವೆಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ತೀರ್ಪು ನೀಡಿದ್ದು, ಅದು ಐಎಲ್‌ಆರ್-2002 ಕೆಎಆರ್-3780ರಲ್ಲಿ ನಮೂದಾಗಿದೆ.

ಸಾರ್ವಜನಿಕ ಏಲಂನಲ್ಲಿ ಪಡೆದುಕೊಂಡ ಇಂತಹ ಭೂಮಿ/ ಸ್ಥಿರಾಸ್ತಿಯನ್ನು ಖರೀದಿದಾರರ ಹೆಸರಿಗೆ ನೋಂದಣಿ ಮಾಡಿದ್ದನ್ನು ಪಹಣಿ ಪತ್ರಿಕೆ ಹಾಗೂ ಇನ್ನಿತರ ಕಂದಾಯ ಇಲಾಖೆ ದಾಖಲೆಗಳಲ್ಲಿ ನಮೂದಿಸಬೇಕೆಂದು ಕರ್ನಾಟಕ ಉಚ್ಚನ್ಯಾಯಾಲಯ, ಸರ್ವೋಚ್ಚ ನ್ಯಾಯಾಲಯದ ತೀರ್ಮಾನಗಳನ್ನು ಉಲ್ಲೇಖಿಸಿ ಮತ್ತೊಂದು ದಾವೆಯಲ್ಲಿ ತೀರ್ಪು ನೀಡಿದೆ. ಅದು ಬಿ.ಶಿವಪ್ಪ ವಿರುದ್ಧ ಕರ್ನಾಟಕ ಸರ್ಕಾರದ ಕೇಸಿನಲ್ಲಿ ಐಎಲ್‌ಆರ್-1990 ಕೆಎಆರ್-1089ರಲ್ಲಿ ನಮೂದಾಗಿದೆ.

**10. ಖಾಸಗಿ ವರ್ಗಾವಣೆ / ಪರಭಾರೆ ಇತ್ಯಾದಿಗಳ ಮೇಲೆ ಜಪ್ತಿಯ ಪರಿಣಾಮ (ನಿಯಮ-39):**

ಈ ನಿಯಮಗಳ ಮೇರೆಗೆ ಯಾವ ಆಸ್ತಿಯನ್ನು ಜಪ್ತಿ ಮಾಡಿದ ಮೇಲೆ ಅದಕ್ಕೆ ವಿರುದ್ಧವಾಗಿ ಖಾಸಗಿಯಾಗಿ ಬೇರೆಯವರಿಗೆ ವರ್ಗಾಯಿಸಿದರೆ ಅಥವಾ ಹಿತಾಸಕ್ತಿಯನ್ನು ವರ್ಗಾಯಿಸಿದರೆ ಅಂತಹ ಜಪ್ತಿಯ ವಿರುದ್ಧ ಯಾವುದೇ ಸಾಲ ಅಥವಾ ಇತರ ಹಣದ ಪಾವತಿಕೊಡುವುದು ಕಾನೂನು ಬದ್ಧವಾಗಿರುವುದಿಲ್ಲ.

ಮುಂದಿನ ಸಂಚಿಕೆಗೆ...

# ದಿ ಅಕ್ಕಿ-ಆಲೂರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ 102ನೇ ವಾರ್ಷಿಕ ಮಹಾಸಭೆ





ದಿ ಅಕ್ಕಿ–ಆಲೂರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ 102ನೇ ವಾರ್ಷಿಕ ಮಹಾಸಭೆಯು ದಿನಾಂಕ : 21.09.2024 ರಂದು ಜರುಗಿತು. ಅಕ್ಕಿ–ಆಲೂರಿನ ಮುತ್ತಿನಕಂತಿಮಠ ಗುರುಪೀಠಾಧಿಪತಿಗಳಾದ ಷ ಬ್ರ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಸಾನಿಧ್ಯವಹಿಸಿದ್ದರು.

ಧಾರವಾಡ ಜಿಲ್ಲೆಯ ಕೆಸಿಸಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ನಿಂಗನಗೌಡ ಮರಿಗೌಡರ ಸಾ। ಅಗಡಿ ಇವರು ಉದ್ಘಾಟಿಸಿದರು. ಕೆಸಿಸಿ ಬ್ಯಾಂಕಿನ ನಿರ್ದೇಶಕರಾದ ಶೀ ಸದಾನಂದ ಮೆಳ್ಳಳ್ಳಿ ಹಾಗೂ ದಿ ಹಿರೇಕೆರೂರ ಅರ್ಬನ್ ಕೋ–ಆಪರೇಟಿವ್ ಕ್ರೆಡಿಟ್ ಸೊಸಾಯಿಟಿ ಇದರ ಅಧ್ಯಕ್ಷರಾದ ಶ್ರೀ ಸಿದ್ಧಲಿಂಗೇಶ ಪಿ ಶಟ್ಟರ ಇವರು ಮುಖ್ಯಅತಿಥಿಯಾಗಿ ಆಗಮಿಸಿದ್ದರು.

ಅಧ್ಯಕ್ಷತೆಯನ್ನು ಚೇರಮನ ಶ್ರೀ ಷಣ್ಮುಖಪ್ಪ ಎಸ್ ಮುಚ್ಚಂಡಿ ವಹಿಸಿದ್ದರು. ವೈಸಚೇರಮನರಾದ ಶ್ರೀ ಶಿದ್ರಾಮಪ್ಪ ಎಮ್. ವಿರುಪಣ್ಣನವರ ಹಾಗೂ ಬ್ಯಾಂಕಿನ ಎಲ್ಲ ನಿರ್ದೇಶಕ ಮಂಡಳಿ ಸದಸ್ಯರು ಉಪಸ್ಥಿತರಿದ್ದರು. ಸದಸ್ಯರ ಪ್ರಶ್ನಾವಳಿಗೆ ಮ್ಯಾನೇಜರ ಶ್ರೀ ಎಸ್.ಎಸ್. ಬಮ್ಮಿಗಟ್ಟಿ ಇವರು ಸಮಂಜಸ ಉತ್ತರವನ್ನು ನೀಡಿದರು. ಸಭಾಧ್ಯಕ್ಷರ ನುಡಿಯಲ್ಲಿ ಶ್ರೀ ಷಣ್ಮುಖಪ್ಪ ಎಸ್ ಮುಚ್ಚಂಡಿ ಮಾತನಾಡುತ್ತಾ, ಆಡಳಿತ ಮಂಡಲಿಯ ಕಾರ್ಯವೈಖರಿ, ಸಮಯೋಚಿತ ನಿರ್ಧಾರ ಹಾಗು ವೃತ್ತಿಪರತೆಯಲ್ಲಿ ಬ್ಯಾಂಕನ್ನು ಮತ್ತಷ್ಟು ಮೇಲಕ್ಕೇರಲು ಸದಸ್ಯರ ಸಹಕಾರವನ್ನು ನೀರಿಕ್ಷಿಸಿದರು. ಗುರುಪೀಠದ ಶ್ರೀಗಳು ಆಶೀರ್ವಚನ ನೀಡಿದರು. ಕೊನೆಯಲ್ಲಿ ನಿರ್ದೇಶಕ ಶ್ರೀ ಬಾನಪ್ಪ ಲಮಾಣಿ ವಂದನಾರ್ಪಣೆ ಮಾಡಿದರು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






**ಸುಧಾಕರ್ ಭಟ್**, ಬ್ಯಾಂಕಿಂಗ್ ಸಲಹೆಗಾರರು.

**01. ಬ್ಯಾಂಕಿನ ಒಟ್ಟು ಆಸ್ತಿಯ ಶೇ.10ರಷ್ಟನ್ನು ಗೃಹ ನಿರ್ಮಾಣ ಸಾಲ ಕೊಡಬಹುದು. ಅದಲ್ಲದೆ, ಆದ್ಯತಾ ವಲಯಕ್ಕೆ ನೀಡುವ ಗೃಹ ಸಾಲವನ್ನು ಪರಿಗಣಿಸಿದರೆ ಒಟ್ಟು ಗೃಹ ಸಾಲ ಒಟ್ಟು ಆಸ್ತಿಯ ಶೇ.15ರಷ್ಟನ್ನು ಮೀರಬಾರದು. ನಮ್ಮ ಬ್ಯಾಂಕು ಗೃಹ ಸಾಲದ ಶೇ.15ರ ಗಡಿಯನ್ನು ತಲುಪಿದೆ. ಎಲ್ಲಾ ಸಾಲಗಳಿಗೆ ಭದ್ರತೆ ಇದೆ. ನಾವು ಗೃಹ ಸಾಲದ ಗರಿಷ್ಠ ಮಿತಿಯನ್ನು ದಾಟಬಹುದೇ?**

**ಉತ್ತರ :** ಹಿಂದಿನ ಮಾರ್ಚ್ 31ರಲ್ಲಿದ್ದ ಬ್ಯಾಂಕಿನ ನಿವ್ವಳ ಆಸ್ತಿಯ ಶೇ.10ರಷ್ಟನ್ನು ಒಟ್ಟು ಗೃಹ ಸಾಲ ನೀಡಬಹುದು. ಈ ಮಿತಿಯೊಳಗೆ ವಾಣಿಜ್ಯ ರಿಯಲ್ ಎಸ್ಟೇಟ್‌ಗೆ ನೀಡಿದ ಸಾಲವೂ ಸೇರಿರುತ್ತದೆ. ಆದ್ಯತಾ ವಲಯದ ಸಾಲವೆಂದು ಪರಿಗಣಿಸಲ್ಪಡುವ ಗೃಹ ಸಾಲವನ್ನು ಹೆಚ್ಚುವರಿ ಶೇ.5ರಷ್ಟನ್ನು ನೀಡಬಹುದು. ನಿಮ್ಮ ಬ್ಯಾಂಕಿನ ಗೃಹಸಾಲ, ವಾಣಿಜ್ಯ ರಿಯಲ್ ಎಸ್ಟೇಟ್ ಸಾಲಗಳನ್ನು ಸೇರಿಸಿ ಒಟ್ಟು ನಿವ್ವಳ ಆಸ್ತಿಯ ಶೇ.15ರಷ್ಟನ್ನು ತಲುಪಿದ್ದರೆ ಹೊಸ ಗೃಹ ಸಾಲಗಳನ್ನು ನೀಡುವಂತಿಲ್ಲ. ಸಂಪೂರ್ಣವಾಗಿ ವಿತರಿಸಲಾದ ಸಾಲಗಳಲ್ಲಿ ಮರುಪಾವತಿಯಾಗಿದ್ದರೆ, ಆ ಮಟ್ಟಿಗೆ ಹೊಸ ಸಾಲಗಳನ್ನು ನೀಡಬಹುದು.

**02. ಪಟ್ಟಣ ಸಹಕಾರ ಬ್ಯಾಂಕುಗಳು ಬೇರೆ ಪಟ್ಟಣ ಸಹಕಾರ ಬ್ಯಾಂಕಿನಲ್ಲಿ ಠೇವಣಿ ಇಡಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಮಂಗಳೂರು.**

**ಉತ್ತರ :** ಆರ್ಥಿಕವಾಗಿ ಸದೃಢವಾಗಿದ್ದು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಶೆಡ್ಯೂಲ್ಡ್ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಇನ್ನೊಂದು ಪಟ್ಟಣ ಸಹಕಾರ ಬ್ಯಾಂಕು ಠೇವಣಿ ಇರಿಸಬಹುದು.

**03. ನಮ್ಮ ಇಬ್ಬರು ಉದ್ಯೋಗಿಗಳು ತಮ್ಮ ವೇತನ ಶ್ರೇಣಿಯ ಕೊನೆಯನ್ನು ತಲುಪಿದ್ದಾರೆ. ಈಗ ಅವರಿಗೆ ವೈಯಕ್ತಿಕ ವೇತನ (Personal pay) ವನ್ನು ನೀಡಬೇಕಿದೆ. ವೈಯಕ್ತಿಕ ವೇತನದೊಂದಿಗೆ ತುಟ್ಟಿಭತ್ಯೆ ಮತ್ತು ಇತರ ಭತ್ಯೆಗಳನ್ನು ನೀಡಬೇಕೆ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಸಹಕಾರ ಸಂಘಗಳ ನಿಯಮ 17ರಂತೆ ಆರ್ಥಿಕವಾಗಿ ಸದೃಢವಾದ ಪಟ್ಟಣ ಸಹಕಾರ ಬ್ಯಾಂಕಿನ ಆಡಳಿತ ಮಂಡಳಿ ತಮ್ಮ ಉದ್ಯೋಗಿಗಳ ವೇತನಶ್ರೇಣಿ ಮತ್ತು ಇತರ ಭತ್ಯೆಗಳನ್ನು ನಿರ್ಧರಿಸಲು ಸ್ವತಂತ್ರವಾಗಿದೆ. ಮಹಾಮಂಡಳ ಶಿಫಾರಸು ಮಾಡಿದ ಪಟ್ಟಣ ಸಹಕಾರ ಬ್ಯಾಂಕುಗಳ ಉದ್ಯೋಗಿಗಳ ವೇತನ ಶ್ರೇಣಿಗಳಲ್ಲಿ ವೈಯಕ್ತಿಕ ವೇತನ (ಪಿ.ಪಿ)ವು ನಿಶ್ಚಲತೆಯ ಏರಿಕೆ (Stagnation Increments)ಗಳನ್ನು ಸೂಚಿಸುತ್ತದೆ ಮತ್ತು ಇದು 'ಮೂಲವೇತನ' (Basic pay)ದ ಭಾಗವಾಗಿರುತ್ತದೆ. ತುಟ್ಟಿಭತ್ಯೆ ಮತ್ತು ಇತರ ಭತ್ಯೆಗಳನ್ನು ಮಿತಿಗೆ ಒಳಪಟ್ಟು ಮೂಲ ವೇತನದ ಮೇಲೆ ಪಾವತಿಸಬೇಕಾಗಿದೆ.



## ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಬಸವಕಲ್ಯಾಣ ತಾಲೂಕಿನ ಹಳ್ಳಿಯೊಂದರಲ್ಲಿ 9ನೇ ತರಗತಿ ಓದುತ್ತಿರುವ ಬಾಲಕಿ ತನ್ನ ಮಾವನೊಂದಿಗೆ ನಡೆಯಲಿದ್ದ ತನ್ನ ಬಾಲ್ಯ ವಿವಾಹವನ್ನು ನಿಲ್ಲಿಸಿ, ತಾನು ವಯಸ್ಕಳಾಗಿ ತನ್ನ ಸ್ವಂತ ಕಾಲಿನ ಮೇಲೆ ನಿಲ್ಲುವವರೆಗೂ ಮದುವೆಯಾಗುವುದಿಲ್ಲ ಎಂದು ಹೇಳಿದ್ದಾಳೆ.
- ವಿಶ್ವ ಪ್ರವಾಸೋದ್ಯಮ ದಿನದ ಅಂಗವಾಗಿ ನಡೆಯುವ ಅತ್ಯುತ್ತಮ ಪ್ರವಾಸಿ ಹಳ್ಳಿಗಳು ಸ್ಪರ್ಧೆಯಲ್ಲಿ ಬೆಳ್ತಂಗಡಿ ತಾಲೂಕಿನ ಕುತ್ಲೂರು ಗ್ರಾಮ ಅತ್ಯುತ್ತಮ ಸಾಹಸಿಕ ಪ್ರವಾಸಿ ತಾಣ ವಿಭಾಗದಲ್ಲಿ ರಾಷ್ಟ್ರ ಪ್ರಶಸ್ತಿಗೆ ಭಾಜನವಾಗಿದೆ.
- ತ್ರಿಶೂರ್‌ನಲ್ಲಿ ಒಂದೇ ರಾತ್ರಿಯಲ್ಲಿ ಐದು ಮಂದಿ ಇದ್ದ ದರೋಡೆ ಗ್ಯಾಂಗ್ ಎಸ್‌ಬಿಐ ಬ್ಯಾಂಕಿನ ಮೂರು ಬೇರೆ ಬೇರೆ ಪ್ರದೇಶಗಳ ಎಟಿಎಂಗಳಲ್ಲಿ ಲೂಟಿ ಮಾಡಿ 65 ಲಕ್ಷ ರೂಪಾಯಿಗಳನ್ನು ದರೋಡೆ ಮಾಡಿದೆ.
- ಜಪಾನ್ ದೇಶದ ಮಾಜಿ ರಕ್ಷಣಾ ಸಚಿವರಾದ ಶಿಗೆರು ಇಶಿಬಾ ಅವರು ಅಲ್ಲಿನ ನೂತನ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ.
- ಶಿವಮೊಗ್ಗಾದ ಸಾವಿತ್ರಮ್ಮ ಅವರು ಹುಬ್ಬಳ್ಳಿಯಲ್ಲಿ ಬ್ಯಾಗ್ ಮರೆತು ಬಸ್ಸ್ ಇಳಿದಿದ್ದರು. ನಿರ್ವಾಹಕರಾದ ಸಿ.ಎಸ್. ಸಿರಿಯಮ್ಮನವರ ಬ್ಯಾಗ್ ತೆಗೆದು ನೋಡಿ ಅದರಲ್ಲಿದ್ದ ಒಡವೆ, ಹಣ ಜೊತೆಗಿದ್ದ ಆಧಾರ್ ಕಾರ್ಡಿನಲ್ಲಿದ್ದ ಫೋನ್ ನಂಬರಿಗೆ ಕರೆ ಮಾಡಿ ಅವರನ್ನು ಕರಿಸಿ, ತಮ್ಮ ಅಧಿಕಾರಿಗಳ ಸಮಕ್ಷಮದಲ್ಲಿ ಬ್ಯಾಗನ್ನು ಹಸ್ತಾಂತರಿಸಿದ್ದಾರೆ.
- ಐಷಾರಾಮಿ ಹೋಟೆಲ್ ರಿವ್ಯೂ ನೀಡಿದರೆ ಕಮಿಷನ್ ನೀಡುವುದಾಗಿ ನಂಬಿಸಿ ಆನ್‌ಲೈನ್‌ನಲ್ಲಿ ಬ್ಯಾಂಕ್ ಖಾತೆಗಳಿಗೆ ಕನ್ನ ಹಾಕುತ್ತಿದ್ದ ಚೀನಾ ಮೂಲದ ಸೈಬರ್ ವಂಚಕರ ಜಾಲವನ್ನು ಬೆಂಗಳೂರು ಉತ್ತರ ವಿಭಾಗದ ಸೈಬರ್ ಪೊಲೀಸರು ಭೇದಿಸಿ ಹತ್ತು ಮಂದಿಯನ್ನು ಬಂಧಿಸಿದ್ದಾರೆ. ಇವರುಗಳು ಸುಮಾರು 6 ಕೋಟಿ ರೂಪಾಯಿ ವಂಚಿಸಿರುವುದು ಬೆಳಕಿಗೆ ಬಂದಿದೆ.
- ನಾಸಾ ನಿರ್ಮಿಸಿರುವ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಮಾನವ ಈವರೆವಿಗೂ ನಿರ್ಮಿಸಿದ ಅತ್ಯಂತ ದುಬಾರಿ ವೆಚ್ಚದ ತಾಣವಾಗಿದೆ. ಇದನ್ನು ನಿರ್ಮಿಸಲು ಬರೋಬ್ಬರಿ 100 ಬಿಲಿಯನ್ ಡಾಲರ್ ವೆಚ್ಚವಾಗಿದೆ. ಇದು ಗಿನ್ನಿಸ್ ವರ್ಡ್ ರೆಕಾರ್ಡ್‌ನಲ್ಲಿಯೂ ದಾಖಲಾಗಿದೆ.

## ಓದುಗರ ಅನಿಸಿಕೆ...



**ಪ್ರತಿಭಾ ಪುರಸ್ಕಾರ :** ಪಟ್ಟಣ ಸಹಕಾರ ಬ್ಯಾಂಕುಗಳು ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಸದಸ್ಯರ ಮಕ್ಕಳ ಪ್ರತಿಭೆಯನ್ನು ಗುರುತಿಸಿ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸುತ್ತಿವೆ. ಜೊತೆಗೆ, ಪ್ರಸಕ್ತ ಸಾಲಿನಲ್ಲಿ ಗಳಿಸಿದ ಉತ್ತಮ ಲಾಭಕ್ಕೆ ಬ್ಯಾಂಕಿನ ಸದಸ್ಯರಿಗೆ ಶೇಕಡ ಇಷ್ಟೊಂದು ಲಾಭಾಂಶ ವಿತರಣೆ ಮಾಡುತ್ತಿರುವುದು ಇದಲ್ಲದೆ, ಉತ್ತಮವಾಗಿ ಕಾರ್ಯನಿರ್ವಹಿಸಿದ ಅಧಿಕಾರಿ, ಸಿಬ್ಬಂದಿಗಳಿಗೆ ಗೌರವಿಸುತ್ತಿರುವುದು ಮೆಚ್ಚತಕ್ಕ ವಿಚಾರವಾಗಿದೆ.

**▸▸ ನರಸಿಂಹಮೂರ್ತಿ ಎಂ., ಭದ್ರಾವತಿ**

**ಅಂಕೆ ಇಲ್ಲದ ಖೋಟಾನೋಟು ಜಾಲ :** ಎಲ್ಲೆಡೆ ಖೋಟಾನೋಟು ಜಾಲ ಅವ್ಯಾಹತವಾಗಿದ್ದು, ವ್ಯಕ್ತಿಯೊಬ್ಬ ಆರ್‌ಬಿಐಗೇ ಖೋಟಾನೋಟುಗಳನ್ನು ಡೆಪಾಸಿಟ್ ಮಾಡಲು ಬಂದಿದ್ದ ಎನ್ನುವ ಸುದ್ದಿ ಆಘಾತ ಉಂಟು ಮಾಡಿದೆ. ಜತೆಗೆ, ನೆರೆಯ ರಾಜ್ಯದಲ್ಲಿಯೇ ಖೋಟಾನೋಟು ತಯಾರಾಗುತ್ತಿರುವುದರ ಬಗ್ಗೆಯೂ ತಿಳಿಸಿದ್ದಾನೆ. ಇದನ್ನೆಲ್ಲ ನೋಡಿದರೆ, ಈ ದಂಧೆ ಯಾವುದೇ ಅಂಕೆ ಇಲ್ಲದೆ ನಡೆಯುತ್ತಿರುವಂತೆ ಕಾಣುತ್ತಿದೆ.

**▸▸ ಎಲ್. ಮಹದೇವಯ್ಯ, ಚಾಮರಾಜನಗರ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

ಇವರಿಗೆ,

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.